# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 218 |
| ಸದಸ್ಯರ ಹೆಸರು | : | ಶ್ರೀ ಐವನ್ ಡಿ'ಸೋಜ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16-07-2024 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳು ಕಳಪೆ ಮಟ್ಟದ್ದಾಗಿದ್ದು ಅನೇಕ ಕಾಮಗಾರಿಗಳು ಮಳೆಗಾಲದಲ್ಲಿ ಕುಸಿದುಬಿದ್ದು ಉಂಟಾದ ಅಪಾರ ಹಾನಿಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು. | ಸ್ಮಾರ್ಟ್ ಸಿಟಿ ಅಭಿಯಾನದಡಿ ಸಮುದ್ರ ಕಿನಾರೆ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿ 6 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಇದರಲ್ಲಿ 1 ಕಾಮಗಾರಿಯಲ್ಲಿ ಮಾತ್ರ ತಡೆ ಗೋಡೆಗೆ ಅಲ್ಪ ಮಾತ್ರದ ಹಾನಿಯಾಗಿದ್ದು ಉಳಿದ ಯಾವುದೇ ಕಾಮಗಾರಿಗಳಲ್ಲಿ ಪ್ರಸ್ತುತ ಮಳೆಗಾಲದಲ್ಲಿ ಹಾನಿಯಾಗಿರುವುದಿಲ್ಲ.<br><br>ಸ್ಮಾರ್ಟ್ ಸಿಟಿ ಅಭಿಯಾನದಡಿ ಸಮುದ್ರ ಕಿನಾರೆ ಪ್ರದೇಶಗಳ ಅಭಿವೃದ್ಧಿ ಯೋಜನೆಯಡಿ 6 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಈ ಪೈಕಿ ಜಲಾಭಿಮುಖ ವಾಯುವಿಹಾರ ಕಾಮಗಾರಿಯು ಒಂದಾಗಿದ್ದು, ಸದರಿ ಕಾಮಗಾರಿಗೆ ದಿನಾಂಕ 07/10/2020 ರಂದು ಕರ್ನಾಟಕ ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಿದಿಂದ ಅನುಮೋದನೆ ದೊರೆತಿರುತ್ತದೆ. ಅದರಂತೆ Un coursed rubble masonry ಮೂಲಕ ನದಿ ಬದಿ ಕಡೆಗೆ ತಡೆಗೋಡೆ ನಿರ್ಮಿಸಲಾಗುತ್ತಿದ್ದು, ಈಗಾಗಲೇ ಸದರಿ ಭಾಗದಲ್ಲಿ 714ಮೀ, ತಡೆಗೋಡೆ ನಿರ್ಮಾಣಗೊಂಡಿದ್ದು ಅದರಲ್ಲಿ ಸುಮಾರು 15ಮೀ ಉದ್ದ ತಡೆಗೋಡೆ ಮಾತ್ರ ಕುಸಿದಿದೆ.<br><br>ಜಲಾಭಿಮುಖ ವಾಯುವಿಹಾರ ಕಾಮಗಾರಿಯಲ್ಲಿ ಪಾದಚಾರಿ ಮಾರ್ಗ, ಸೈಕಲ್ ಮಾರ್ಗ ಹಾಗೂ ಇತರೆ ಮೂಲ ಸೌಕರ್ಯಗಳನ್ನು ನಿರ್ಮಾಣ ಮಾಡುವ ಪೂರ್ವದಲ್ಲಿ ನೆಲವನ್ನು ಅವಶ್ಯಕ ಎತ್ತರಕ್ಕೆ ಮಟ್ಟ ಮಾಡಲು ನದಿಯ ಅಂಚಿನಲ್ಲಿ Layer by Layer ಮಣ್ಣನ್ನು compact ಮಾಡಬೇಕಾಗಿರುತ್ತದೆ. ಇದಕ್ಕಾಗಿ ತಡೆಗೋಡೆ ನಿರ್ಮಾಣ ಕಾಮಗಾರಿ ಪೂರ್ಣಗೊಂಡ ಕಾಮಗಾರಿ ಪ್ರದೇಶದಲ್ಲಿ ಗುತ್ತಿಗೆದಾರರು ಮಣ್ಣನ್ನು ಶೇಕರಣೆ ಮಾಡಿದ್ದು, ಈ ನಡುವೆ ಮಾನ್ಯ ಹಸಿರು ನ್ಯಾಯ ಮಂಡಳಿಯು ನದಿ ಭಾಗದಲ್ಲಿ ಯಾವುದೇ ಕಾಮಗಾರಿ ನಡೆಸದಂತೆ ತಡೆಯಾಜ್ಞೆ ನೀಡಿರುವ ಕಾರಣ, ಮಣ್ಣನ್ನು ಹರಡಿ compact ಮಾಡಲು ಆಗಿರುವುದಿಲ್ಲ.<br><br>ಸದರಿ ಪ್ರದೇಶದಲ್ಲಿ ದಿನಾಂಕ 20/05/2024 ರಿಂದ 08/06/2024 ವರೆಗೆ ಅತೀ ಹೆಚ್ಚಿನ ಮಳೆಯಾಗಿದ್ದು, ಪ್ರಾಕೃತಿಕವಾಗಿ ಹೆಚ್ಚಿನ ಮಳೆ ನೀರು ಈ ಭಾಗದಿಂದ ಹರಿದು ಬಂದಿದ್ದು, ಶೇಕರಣೆ ಮಾಡಲಾಗಿರುವ ಮಣ್ಣು ತಡೆಗೋಡೆ ಕಡೆಗೆ ರಭಸವಾಗಿ ಹರಿದ ಕಾರಣ 15 ಮೀ ತಡೆಗೋಡೆ ಕುಸಿದಿರುತ್ತದೆ ಮತ್ತು ಹಸಿರು ನ್ಯಾಯ ಮಂಡಳಿಯಲ್ಲಿ ಕಾಮಗಾರಿಗೆ ತಾತ್ಕಾಲಿಕ ತಡೆಯಾಜ್ಞೆ ಇರುವುದರಿಂದ ಕುಸಿದ ತಡೆಗೋಡೆ ಪುನರ್ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲು ಕಷ್ಟ ಸಾಧ್ಯವಾಗಿದೆ. ಆದಾಗ್ಯೂ ಹಾನಿಯಾಗಿರುವ ಭಾಗದಲ್ಲಿ ಜನರ ಓಡಾಟ ನಿಯಂತ್ರಿಸಲು ಹಾಗೂ ಸುರಕ್ಷತೆ ದೃಷ್ಟಿಯಿಂದ Barricade ಗಳನ್ನು ಒದಗಿಸಲಾಗಿದೆ.<br><br>ಸದರಿ ಕಾಮಗಾರಿಗೆ NGT ನ್ಯಾಯಾಲಯದ ತಡೆಯಾಜ್ಞೆ ಇರುವ ಕಾರಣ ಹಾಗೂ ಅತಿಹೆಚ್ಚು ಮಳೆಯಿಂದಾಗಿ 15 ಮೀ ಉದ್ದದ ತಡೆಗೋಡೆ ಮಾತ್ರ ಕುಸಿದಿದ್ದು, ಕಳಪೆ ಕಾಮಗಾರಿಯಿಂದಾಗಿ ಕುಸಿದು ಬಿದ್ದಿರುವುದಿಲ್ಲ. |

| | | |
|---|---|---|
| ಆ) | ಸ್ಮಾರ್ಟ್ ಸಿಟಿ ಯೋಜನೆ ಅನ್ವಯ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಂಡಿರುವ ಯೋಜನೆಗಳಾವುವು. ಅವುಗಳಿಗೆ ವಿನಿಯೋಗಿಸಿದ ಮೊತ್ತ ಎಷ್ಟು; | ಸ್ಮಾರ್ಟ್ ಸಿಟಿ ಅಭಿಯಾನದಡಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಕೈಗೊಂಡಿರುವ ಕಾಮಗಾರಿಗಳು ಹಾಗೂ ಅವುಗಳಿಗೆ ವಿನಿಯೋಗಿಸಿದ ಮೊತ್ತದ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |
| ಇ) | ಸ್ಮಾರ್ಟ್ ಸಿಟಿ ಯೋಜನೆಯ ಬಂದರು ಅಭಿವೃದ್ಧಿಗೆ ಸ್ಮಾರ್ಟ್ ಸಿಟಿ ಯೋಜನೆಯಿಂದ ಕೈಗೊಂಡ ಕ್ರಮಗಳೇನು. | ಸ್ಮಾರ್ಟ್ ಸಿಟಿ ಅಭಿಯಾನದಡಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ಬಂದರು ಅಭಿವೃದ್ಧಿಗೆ ಸಂಬಂದಿಸಿದಂತೆ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. |
| ಈ) | ಸ್ಮಾರ್ಟ್ ಸಿಟಿ ಮೂಲ ಉದ್ದೇಶವನ್ನು ಬಿಟ್ಟು ರಸ್ತೆ ಮತ್ತು ಚರಂಡಿಗಳಿಗೆ ಹಣ ವಿನಿಯೋಗಿಸಲಾಗಿದೆ. ಎಂಬ ದೂರುಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿಯನುಸಾರ ಕೈಗೊಳ್ಳಬಹುದಾದ ಪ್ರಮುಖ ಮೂಲಭೂತ ಸೌಕರ್ಯಗಳು ಈ ಕೆಳಗಿನಂತಿವೆ;<br>• ಸ್ಮಾರ್ಟ್ ರಸ್ತೆಗಳ ಅಭಿವೃದ್ಧಿ<br>• ಉದ್ಯಾನವನಗಳ ಅಭಿವೃದ್ಧಿ<br>• ಕೆರೆ ಹಾಗೂ ನದಿ ಪ್ರದೇಶಗಳ ಅಭಿವೃದ್ಧಿ<br>• ಒಳಚರಂಡಿ ಕಾಮಗಾರಿಗಳು<br>• ಮಾರುಕಟ್ಟೆಗಳ ಪುನರ್ ನವೀಕರಣ<br>• ಇಂಟಿಗ್ರೇಟೆಡ್ ಕಮಾಂಡ್ & ಕಂಟ್ರೋಲ್ ಸೆಂಟರ್ ಮತ್ತ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಆಧಾರಿತ ಸೇವೆಗಳು.<br>• ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ<br>• ಕ್ರೀಡಾಂಗಣ/ಈಜುಕೊಳಗಳ ಅಭಿವೃದ್ಧಿ<br>• ಪಾರ್ಕಿಂಗ್ ಪ್ರದೇಶಗಳ ಅಭಿವೃದ್ಧಿ<br>• ಘನ ತ್ಯಾಜ್ಯ ನಿರ್ವಹಣೆ<br><br>ಸ್ಮಾರ್ಟ್ ಸಿಟಿ ಅಭಿಯಾನದ ಮಾರ್ಗಸೂಚಿಗಳ ಅನುಸಾರವೇ ಕಾಮಗಾರಿಗಳನ್ನು ಮಂಗಳೂರು ಸ್ಮಾರ್ಟ್ ಸಿಟಿ ವತಿಯಿಂದ ಕೈಗೊಳ್ಳಲಾಗಿದ್ದು ಕೇವಲ ರಸ್ತೆ ಮತ್ತು ಚರಂಡಿಗಳಿಗೆ ಹಣ ವಿನಿಯೋಗಿಸಿರುವುದಿಲ್ಲ.<br><br>ರಸ್ತೆ ಮತ್ತು ಚರಂಡಿ ಕಾಮಗಾರಿಗಳನ್ನು ಹೊರತು ಪಡಿಸಿ Wenlock ಸರ್ಕಾರಿ ಆಸ್ಪತ್ರೆಯ ಅಭಿವೃದ್ಧಿ, ಮಂಗಳಾ ಸ್ಟೇಡಿಯಂ ಹಾಗೂ ಒಲಿಂಪಿಕ್-FINA ಮಾನದಂಡದಂತೆ ಅಂತಾರಾಷ್ಟ್ರೀಯ ಮಟ್ಟದ ಈಜುಕೊಳದ ನಿರ್ಮಾಣ, 13 ಸರ್ಕಾರಿ ಶಾಲೆಗಳಲ್ಲಿ ಇ-ಸ್ಮಾರ್ಟ್ ಸ್ಕೂಲ್ ಸೌಲಭ್ಯ, ಗುಜ್ಜರಕೆರೆ ಹಾಗೂ ಕಾವೂರು ಕೆರೆ ಅಭಿವೃದ್ಧಿ, ಮಂಗಳಾದೇವಿ ದೇವಸ್ಥಾನದ ರಸ್ತೆ ಹಾಗೂ ವೆಂಕಟರಮಣ ದೇವಸ್ಥಾನದ ರಥಬೀದಿ ರಸ್ತೆ ಅಭಿವೃದ್ಧಿ, ಮಂಗಳಾದೇವಿ ಬಸ್ ಟರ್ಮಿನಲ್ ನಿರ್ಮಾಣ ಹೀಗೆ ಹಲವಾರು ಜನೋಪಯೋಗಿ ಪ್ರಮುಖ ಕಾಮಗಾರಿಗಳನ್ನೂ ಸಹ ಕೈಗೊಳ್ಳಲಾಗಿದೆ. |

ಸಂಖ್ಯೆ: ನಅಇ 110 ಸಿಎಸ್ಎಸ್ 2024

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

ಅನುಬಂಧ

**ಅನುಬಂಧ-1**

# ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್

ನಿಗದಿ ಪಡಿಸಿದ ಒಟ್ಟು ಅನುದಾನ: ರೂ. 1000.00 ಕೋಟಿಗಳು (ಯೋಜನೆಗಳಿಗೆ ರೂ. 930.00 ಕೋಟಿಗಳು ಹಾಗೂ ಆಡಳಿತ ಮತ್ತು ಇತರೆ ವೆಚ್ಚಗಳಿಗೆ ರೂ. 70.00 ಕೋಟಿಗಳು)

| ಕ್ರ. ಸಂ. | ಯೋಜನೆ/ ಕಾರ್ಯಕ್ರಮಗಳ ವಿವರ | ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ) | ಡಿ.ಪಿ.ಆರ್ ಮೊತ್ತ (ರೂ. ಕೋಟಿಗಳಲ್ಲಿ) | ಒಟ್ಟು ಖರ್ಚು (ಇಲ್ಲಿಯವರೆಗೆ) (ರೂ. ಕೋಟಿಗಳಲ್ಲಿ) | ಪ್ರಸ್ತುತ ಸ್ಥಿತಿ | ಷರಾ |
|---|---|---|---|---|---|---|
| 1 | ಅ. ಸ್ಮಾರ್ಟ್ ರಸ್ತೆಗಳು (ಒಟ್ಟು 7 ಪ್ಯಾಕೇಜ್‌ಗಳು)<br><br>ಆ. ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ 66 ರಿಂದ ಮಹಾಕಾಳಿಪಡ್ಪು ರೈಲ್ವೆ ಕೆಳ ಸೇತುವೆ ಮುಖಾಂತರ ಮೋರ್ಗಾನ್ಸ್ ಗೇಟ್ ಜಂಕ್ಷನ್ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ರೂ. 50.00 ಕೋಟಿಗಳು) | ಕೇಂದ್ರ: ರೂ. 416.50 ಕೋಟಿಗಳು<br>ರಾಜ್ಯ: ರೂ. 426.50 ಕೋಟಿಗಳು<br>ಒಟ್ಟು ರೂ. 843.00 ಕೋಟಿಗಳು | 303.53 | 276.95 | ಅ. ಮೂರು ಪ್ಯಾಕೇಜ್ ಕಾಮಗಾರಿ ಪೂರ್ಣಗೊಂಡಿರುತ್ತದೆ. ಹಾಲಿ 4 ರಸ್ತೆ ಪ್ಯಾಕೇಜ್ ಕಾಮಗಾರಿ ಪ್ರಗತಿಯಲ್ಲಿದೆ.<br><br>ಆ. ಈಗಾಗಲೇ ರೈಲ್ವೆ ಇಲಾಖೆಗೆ RUB ರಚನೆಗಾಗಿ ರೂ.30.00 ಕೋಟಿಗಳು RUB ಕಾಮಗಾರಿಗೆ ಪಾವತಿಸಲಾಗಿದ್ದು ರೈಲ್ವೆ ಇಲಾಖೆಯಿಂದ RUB ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ವತಿಯಿಂದ ರಸ್ತೆ ಕಾಮಗಾರಿ ಪ್ರಗತಿಯಲ್ಲಿದೆ. | ಸ್ಮಾರ್ಟ್ ರಸ್ತೆ ಕಾಮಗಾರಿಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ರಸ್ತೆ ಕಾಮಗಾರಿಗೆ ಅವಶ್ಯವಿರುವ ಭೂಸ್ವಾಧೀನ ಮಾಡಿ ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಗೆ ಹಸ್ತಾಂತರಿಸಿದ್ದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ. |
| 2 | ಭೂಗತ ಒಳಚರಂಡಿ (ಒಟ್ಟು 5 ಪ್ಯಾಕೇಜ್‌ಗಳು) | | 43.20 | 43.14 | 4 ಪ್ಯಾಕೇಜ್ ಕಾಮಗಾರಿ ಪೂರ್ಣಗೊಂಡಿದೆ. ಬಾಕಿ ಇರುವ ಒಂದು ಪ್ಯಾಕೇಜ್ ಕಾಮಗಾರಿ ಪ್ರಗತಿಯಲ್ಲಿದೆ. | |
| 3 | ಕೆರೆ ಅಭಿವೃದ್ಧಿ (ಒಟ್ಟು 3 ಕೆರೆಗಳು) | | 12.15 | 12.69 | 3 ಕಾಮಗಾರಿ ಪೂರ್ಣಗೊಂಡಿದೆ. | |
| 4 | ಶಿಕ್ಷಣ<br>(ಒಟ್ಟು 3 ಕಾಮಗಾರಿಗಳು) | | 21.74 | 19.37 | 3 ಕಾಮಗಾರಿ ಪೂರ್ಣಗೊಂಡಿದೆ. | |
| 5 | ಆರೋಗ್ಯ/ ವೈದ್ಯಕೀಯ ಉಪಕರಣಗಳ ಪೂರೈಕೆ (ಒಟ್ಟು 5 ಕಾಮಗಾರಿಗಳು) | | 59.75 | 56.71 | 5 ಕಾಮಗಾರಿಗಳು ಪೂರ್ಣಗೊಂಡಿದೆ. | |
| 6 | ಕ್ರೀಡೆ<br>(ಒಟ್ಟು 3 ಕಾಮಗಾರಿಗಳು) | | 55.48 | 52.47 | 2 ಕಾಮಗಾರಿ ಪೂರ್ಣಗೊಂಡಿದೆ, ಉಳಿದ 1 ಕಾಮಗಾರಿ ಪ್ರಗತಿಯಲ್ಲಿದ್ದು, ಜೂನ್ 2024 ರ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ. | |

| | | | | | | |
|---|---|---|---|---|---|---|
| 7 | ವಿದ್ಯುತ್<br>(ಒಟ್ಟು 2 ಕಾಮಗಾರಿಗಳು) | | 6.46 | 6.02 | 2 ಕಾಮಗಾರಿಗಳು ಪೂರ್ಣಗೊಂಡಿದೆ | |
| 8 | ಬಸ್ ತಂಗುದಾಣ<br>(ಒಟ್ಟು 2 ಕಾಮಗಾರಿಗಳು) | | 9.40 | 4.34 | 2 ಕಾಮಗಾರಿಗಳು ಪೂರ್ಣಗೊಂಡಿದೆ | |
| 9 | ಐ.ಸಿ.ಟಿ (Information and Communication Technology)<br>(ಒಟ್ಟು3 ಕಾಮಗಾರಿಗಳು) | | 71.02 | 58.64 | ಐ.ಸಿ.ಟಿ ಯೋಜನೆಯಲ್ಲಿ ಒಟ್ಟು 3 ಕಾಮಗಾರಿಗಳಿದ್ದು. 2 ಕಾಮಗಾರಿ ಪೂರ್ಣಗೊಂಡಿರುತ್ತದೆ. ಒಂದು ಕಾಮಗಾರಿ ಪ್ರಗತಿಯಲ್ಲಿದ್ದು. ಜೂನ್ 2024 ರಲ್ಲಿ ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ. | |
| 10 | ಇತರೆ ಕಟ್ಟಡ ಮತ್ತು ಮೂಲಭೂತ ಸೌಕರ್ಯ<br>(ಒಟ್ಟು 7 ಕಾಮಗಾರಿಗಳು) | | 29.81 | 19.38 | 6 ಕಾಮಗಾರಿಗಳು ಪೂರ್ಣಗೊಂಡಿದೆ, ಉಳಿದ 1 ಕಾಮಗಾರಿ ಪ್ರಗತಿಯಲ್ಲಿದ್ದು. ಜೂನ್ 2024 ರ ಅಂತ್ಯಕ್ಕೆ ಎಲ್ಲಾ ಕಾಮಗಾರಿಗಳು ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ. | |
| 11 | ನೀರು ಸರಬರಾಜು<br>(ಒಟ್ಟು 2 ಕಾಮಗಾರಿಗಳು) | | 124.50 | 122.23 | ರೂ.114 ಕೋಟಿಗಳನ್ನು 24 x 7ನೀರು ಸರಬರಾಜು ಕಾಮಗಾರಿಗೆ ಅನುದಾನ ನೀಡಲಾಗಿರುತ್ತದೆ.<br>ತುಂಬೆ ತಡೆಗೋಡೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. | |
| 12 | ಕದ್ರಿ ಉದ್ಯಾನವನ ರಸ್ತೆ ಅಭಿವೃದ್ಧಿ (ಒಟ್ಟು 2 ಕಾಮಗಾರಿಗಳು) | | 18.41 | 18.41 | ಕಾಮಗಾರಿಗಳು ಪೂರ್ಣಗೊಂಡಿದೆ | |
| 13 | ಜಲಾಭಿಮುಖ ಅಭಿವೃದ್ಧಿ ಕಾಮಗಾರಿ (ಒಟ್ಟು 10 ಕಾಮಗಾರಿಗಳು) | | 105.02 | 5.94 | ಕಾಮಗಾರಿ ಪ್ರಗತಿಯಲ್ಲಿದೆ. | |

ವ್ಯವಸ್ಥಾಪಕ ನಿರ್ದೇಶಕರು
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ಮಂಗಳೂರು

| ಸಾರ್ವಜನಿಕ ಖಾಸಗಿ ಸಹಭಾಗಿತ್ವದ (ಪಿ.ಪಿ.ಪಿ.) ಕಾಮಗಾರಿಗಳು | | | |
|---|---|---|---|
| ಕ್ರಮ ಸಂಖ್ಯೆ | ಯೋಜನೆ/ ಕಾರ್ಯಕ್ರಮಗಳ ವಿವರ | ಕಾಮಗಾರಿ ಮೊತ್ತ | ಪ್ರಸ್ತುತ ಸ್ಥಿತಿ |
| 1 | ಸರ್ಕಾರಿ ಕಟ್ಟಡಗಳ ಮೇಲೆ ಸೌರ ಘಟಕಗಳ ಅನುಸ್ಥಾಪನೆ - ಹಂತ 1 (ರೂ. 7.08 ಕೋಟಿಗಳು) | 7.08 | ಕಾಮಗಾರಿ ಪ್ರಗತಿಯಲ್ಲಿದೆ |
| 2 | ಹಂಪನಕಟ್ಟೆ ಜಂಕ್ಷನ್ ಹಳೇ ಸರ್ವೀಸ್ ಬಸ್ಸು ನಿಲ್ದಾಣ ಸ್ಥಳದಲ್ಲಿ ಬಹು ಮಹಡಿ ಕಾರ್ ಪಾರ್ಕಿಂಗ್ (MLCP) ಅಭಿವೃದ್ಧಿ (ರೂ. 79.05 ಕೋಟಿಗಳು) | 79.05 | ಕಾಮಗಾರಿ ಪ್ರಗತಿಯಲ್ಲಿದೆ |
| 3 | ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ದಾರಿ ದೀಪಗಳನ್ನು LED ಗೆ ಬದಲಾಯಿಸುವುದು (ರೂ. 62.63 ಕೋಟಿಗಳು) | 62.63 | LED ದೀಪ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದ್ದು, ಒಟ್ಟು 16,392 LED ದೀಪಗಳನ್ನು ಅಳವಡಿಸಲಾಗಿದೆ. ಪ್ರಗತಿಯಲ್ಲಿದೆ |
| 4 | ಕೇಂದ್ರ ಮಾರುಕಟ್ಟೆ ಮತ್ತು ಮೀನು ಮಾರುಕಟ್ಟೆಯ ಪುನರ್ ಅಭಿವೃದ್ಧಿ (ರೂ.114.03 ಕೋಟಿಗಳು) | 114.03 | ಕಾಮಗಾರಿ ಪ್ರಗತಿಯಲ್ಲಿದೆ |

ವ್ಯವಸ್ಥಾಪಕ ನಿರ್ದೇಶಕರು
ಮಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ಮಂಗಳೂರು